**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಂಡೂರು**
**ಓ.ಎಸ್. ನಂ: 94/2016**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | **ಪ್ರಭಾಕರ** | **ಸಿ.ಡಬ್ಲ್ಯೂ-01** |
| **ತಂದೆಯ/ಗಂಡನ ಹೆಸರು** | : | **ಮಲೇಶಪ್ಪ** | **ಸಾಕ್ಷಿಗೆ ಪ್ರಮಾಣ ವಚನ ಭೋದಿಸಿದ ದಿನಾಂಕಃ 06.02.2026.** |
| **ವಯಸ್ಸು** | : | **39 ವರ್ಷ** | |
| **ಉದ್ಯೋಗ** | : | **ಸರ್ವೆಯರ್ ತ್ರಿತೂರು** | **Court Commissioner** |

**ಪಾಟೀಸವಾಲು : ವಾದಿ ಪರ ಶ್ರೀ ಜಿ.ಎಂ ವಕೀಲರಿಂದ,**

ಈ ದಾವೆಯ ವಾದಿ ಮತ್ತು ಪ್ರತಿವಾದಿ ನನಗೆ ಗೊತ್ತಿರುತ್ತಾರೆ. ವಾದಿಯು ಈ ದಾವೆಯು ಶಾಶ್ವತ ನಿರ್ಭಂದಕಾಜ್ಞೆಗೊಸ್ಕರ ಹಾಕಿರುತ್ತಾರೆ ಎಂದರೆ ಸರಿ. ದಾವಾ ಜಮೀನಿನಲ್ಲಿ ಹುಣಸೆ ಮರ ಇದ್ದು, ಅದಕ್ಕೆ ತಕರಾರು ಮಾಡಬಾರದು ಎಂದು ವಾದಿ ಈ ದಾವೆಯನ್ನು ಹಾಕಿರುತ್ತಾರೆ ಎಂದರೆ ಇರಬಹುದು. ಪ್ರತಿವಾದಿ ಸಲ್ಲಿಸಿದ ಅರ್ಜಿಯ ಮೇಲೆ ಕೋರ್ಟ್ ಕಮೀಷನರ್ ನೇಮಕಗೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ನಾನು ದಿಃ19.04.2022 ರಂದು ದಾವಾ ಜಮೀನಿಗೆ ಭೇಟಿ ಕೊಟ್ಟು ಅಳತೆ ಮಾಡಿರುತ್ತೇನೆ. ನಾನು ಅಳತೆ ಮಾಡಲು ಒಂದೇ ಬಾರಿಗೆ ಹೋಗಿರುತ್ತೇನೆ. ಅಳತೆ ಮಾಡುವ ಸಮಯದಲ್ಲಿ ವಾದಿ ಮತ್ತು ಪ್ರತಿವಾದಿ ಹಾಜರಿದ್ದರು. ಆ ಸಮಯದಲ್ಲಿ ವಾದಿಯು ನನಗೆ ಜಮೀನು ಅಳತೆ ಮಾಡಿ ಅದರಲ್ಲಿ ಎಷ್ಟು ಹುಣಸೆ ಮರ ಬರುತ್ತದೆ ಎಂದು ನಮೂದು ಮಾಡಿ ಎಂದು ಕೇಳಿಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ ಜಮೀನಿನ ಚೆಕ್‌ಬಂದಿ ಒಳಗಡೆ ಹುಣಸೆ ಮರಗಳು ಬರುತ್ತವೆ. ಆದರೆ ನಾನು ಎಷ್ಟು ಹುಣಸೆ ಮರ ಅಲ್ಲಿ ಇರುತ್ತವೆ ಎಂದು ಗಮನಿಸಿರುವುದಿಲ್ಲ. ನನ್ನ ವರದಿಯಲ್ಲಿ ಎಷ್ಟು ಹುಣಸೆ ಮರಗಳು ಇರುತ್ತವೆ ಎಂದು ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಹುಣಸೆ ಮರಗಳು ಇರುವುದರಿಂದ ಬೌಂಡರಿ ಫಿಕ್ಸ್ ಮಾಡಲು ನನಗೆ ಆಗಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಅಳತೆ ಮಾಡಲು ಹೋದಾಗ ವಾದಿ ಒಬ್ಬರೆ ಇದ್ದರು ಮತ್ತು ಪ್ರತಿವಾದಿ ಅವರ ಕಡೆಯಿಂದ ಸುಮಾರು 100 ಜನ ಬಂದಿದ್ದರು ಎಂದರೆ ಸರಿ. ನಾವು ಅಳತೆ ಮಾಡುವ ಸಮಯದಲ್ಲಿ ವಾದಿ ದೂರದಲ್ಲಿ ನಿಂತಿದ್ದರು ಎಂದರೆ ಸರಿ. ಸುಮಾರು 100 ಜನ ಆ

ಸಮಯದಲ್ಲಿ ಆಲ್ಲಿ ಬಂದಿರುವುದರಿಂದ ಮತ್ತು ಅಲ್ಲಿ ಹುಣಸೆ ಮರ ಇರುವ ಕಾರಣ ನನಗೆ ಸರಿಯಾಗಿ ಬೌಂಡರಿ ಫಿಕ್ಸ್ ಮಾಡಲು ಬಂದಿರುವುದಿಲ್ಲ ಎಂದರೆ ಸರಿಯಲ್ಲ.

ಕಮೀಷನರ್ ವರದಿ ತಯಾರು ಮಾಡುವ ಮುನ್ನ ವಾದಿಯ ಸಹಿಯನ್ನು ಪಡೆಯಲಾಗಿತ್ತು ಎಂದರೆ ಸರಿಯಲ್ಲ. ಹಾಗಾಗೀ ಅವರಿಗೆ ನಂತರವಾಗಿ ನನ್ನ ವರದಿಯಲ್ಲಿ ಹುಣಸೆ ಮರ ಇರುವುದು ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಜಮೀನಿಗೆ ನಾನು ಸರಿಯಾಗಿ ಬೌಂಡರಿ ಫಿಕ್ಸ್ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಮತ್ತು ಎಷ್ಟು ಹುಣಸೆ ಮರ ಇವೆ ಎಂದು ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಹಾಗಾಗೀ ವಾದಿ ಮತ್ತು ಪ್ರತಿವಾದಿಯ ನಡುವೆ ಇರುವ ಸಮಸ್ಯೆ ಹಾಗೇ ಉಳಿದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ವರದಿಯ ತಯಾರಿಸಿದ ನಂತರ ವಾದಿಯ ಸಹಿ ಪಡೆದಿರುವುದಿಲ್ಲ ಮುಂಚೆಯೆ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಹಾಗಾಗೀ ನನ್ನ ವರದಿ ಅಪೂರ್ಣವಾಗಿರುತ್ತದೆ ಎಂದರೆ ಸರಿಯಲ್ಲ.

**<u>ಪಾಟೀಸವಾಲು : ಪ್ರತಿವಾದಿ ಪರ ಃ ಇಲ್ಲ</u>**

**ಮರು ವಿಚಾರಣೆ : ಏನೂ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸರಿ.ಇದೆ.

ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಸಂಡೂರು.